# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್.ರಸ್ತೆ, ತುಮಕೂರು– 572 103

**ದಿನಾಂಕ: 21.05.2018 ರಂದು ಬೆಳಿಗ್ಗೆ 10.30 ಕ್ಕೆ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಯವರ ಕೊಠಡಿಯಲ್ಲಿ ನಡೆದ 2018–19ನೇ ಸಾಲಿನ ಪ್ರಥಮ ಸಾಮಾನ್ಯ ಸಿಂಡಿಕೇಟ್ ಸಭೆಯ ನಡವಳಿಗಳು.**

## ಹಾಜರಾದ ಸದಸ್ಯರು

| | | |
|---|---|---|
| 1. | ಪ್ರೊ. ವೈ.ಎಸ್. ಸಿದ್ದೇಗೌಡ, ಮಾನ್ಯ ಕುಲಪತಿಗಳು | ಅಧ್ಯಕ್ಷರು |
| 2. | ಕಾಲೇಜು ಶಿಕ್ಷಣ ಇಲಾಖೆ ಆಯುಕ್ತರು | ಸದಸ್ಯರು |
| 3. | ಪ್ರೊ. ಪಾಟೀಲ್ ಮಲ್ಲಿಕಾರ್ಜುನ ಬಿ<br>ಡೀನರು, ವಿಜ್ಞಾನ ನಿಕಾಯ | ಸದಸ್ಯರು |
| 4. | ಶ್ರೀ ಹರ್ಷ ಬಿ. | ಸದಸ್ಯರು |
| 5. | ಶ್ರೀ ಮಾಂತಪ್ಪ ಕೆ.ಎಸ್. | ಸದಸ್ಯರು |
| 6. | ಶ್ರೀ ವಿಜಯೇಂದ್ರ ಎಚ್.ಎನ್.<br>ಪ್ರಾಂಶುಪಾಲರು, ಶ್ರೀ ಸಿದ್ಧಾರ್ಥ ಪ್ರಥಮ ದರ್ಜೆ ಕಾಲೇಜು, ತುಮಕೂರು | ಸದಸ್ಯರು |
| 7. | ಡಾ. ರಮೇಶ್ ಬಾಬು ಆರ್. ಕೆ.<br>ಪ್ರಾಂಶುಪಾಲರು, ಸರ್ಕಾರಿ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಪ್ರಥಮ ದರ್ಜೆ ಕಾಲೇಜು, ಶಿರಾ | ಸದಸ್ಯರು |
| 8. | ಶ್ರೀ ಕೃಷ್ಣಪ್ಪ ಸಿ<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗುಬ್ಬಿ | ಸದಸ್ಯರು |
| 9. | ಡಾ. ಆನಂದ ಕುಮಾರಿ ಆರ್.<br>ಪ್ರಾಂಶುಪಾಲರು, ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ತುಮಕೂರು | ಸದಸ್ಯರು |
| 10. | ಶ್ರೀ ಬಿ.ಜಿ. ಮಹಾವೀರ | ಸದಸ್ಯರು |
| 11. | ಶ್ರೀ ಗೋಪಾಲ ಸಿ | ಸದಸ್ಯರು |
| 12. | ಶ್ರೀ ಶಂಕರಪ್ಪ ಕೆ.ಆರ್. | ಸದಸ್ಯರು |
| 13. | ಶ್ರೀ ಪ್ರಭು ಟಿ.ಕೆ. | ಸದಸ್ಯರು |
| 14. | ಶ್ರೀ ಅನಿಲ್ ಕುಮಾರ್ ಕೆ.ಎಸ್ | ಸದಸ್ಯರು |
| 15. | ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 16. | ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |
| 17. | ಹಣಕಾಸು ಅಧಿಕಾರಿಗಳು (ಪ್ರ) | ವಿಶೇಷ ಆಹ್ವಾನಿತರು |

## ಹಾಜರಾಗದ ಸದಸ್ಯರು

| | | |
|---|---|---|
| 1. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |
| 2. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |
| 3. | ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |
| 4. | ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |
| 5. | ಶ್ರೀಮತಿ ಕನ್ಯಾಕುಮಾರಿ ಸಿ.ಎಸ್. | ಸದಸ್ಯರು |



22/5/18

ಪ್ರಸ್ತಾವನೆ:

ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳಾದ ಪ್ರೊ. ಸಿದ್ದೇಗೌಡ ವೈ.ಎಸ್. ಅವರು ದಿನಾಂಕ:21.05.2018ರ ಸೋಮವಾರ ಬೆಳಿಗ್ಗೆ 10.30ಕ್ಕೆ ನಡೆದ 2018-19ನೇ ಸಾಲಿನ ಪ್ರಥಮ ಸಾಮಾನ್ಯ ಸಿಂಡಿಕೇಟ್ ಸಭೆಯಲ್ಲಿ ಹಾಜರಿದ್ದ ಮಾನ್ಯ ಸದಸ್ಯರುಗಳನ್ನು ಆತ್ಮೀಯವಾಗಿ ಸ್ವಾಗತಿಸಿದರು. ನಂತರ ಸಭೆಯ ಕಾರ್ಯಸೂಚಿಯನ್ನು ಚರ್ಚಿಸಿ ಈ ಕೆಳಕಂಡಂತೆ ನಿರ್ಣಯಗಳನ್ನು ಕೈಗೊಳ್ಳಲಾಯಿತು.

| ಕ್ರ.ಸಂ. | ವಿಷಯ ಸಂಖ್ಯೆ | ಕಾರ್ಯಸೂಚಿ ವಿಷಯಗಳು | ನಿರ್ಣಯಗಳು |
|---|---|---|---|
| ಸಿಂಡಿಕೇಟ್ ವಿಭಾಗ | | | |
| 01 | 2018-19.ಸಾ.ಸಿಂ.01<br>ಸಿಂ.ವಿಭಾಗ-01 | ದಿನಾಂಕ: 08.02.2018 ರಂದು ನಡೆದ ಆರನೇ ಸಾಮಾನ್ಯ ಸಿಂಡಿಕೇಟ್ ಸಭೆಯ ಮತ್ತು ದಿನಾಂಕ:13.03.2018ರಂದು ನಡೆದ ನಾಲ್ಕನೇ ವಿಶೇಷ ಸಿಂಡಿಕೇಟ್ ಸಭೆಯ ನಡವಳಿಗಳನ್ನು ದೃಢೀಕರಣಕ್ಕಾಗಿ | ದಿನಾಂಕ: 08.02.2018 ರಂದು ನಡೆದ ಆರನೇ ಸಾಮಾನ್ಯ ಸಿಂಡಿಕೇಟ್ ಸಭೆಯ ನಡವಳಿಯ ಕ್ರಮ ಸಂಖ್ಯೆ:15, ವಿಷಯ ಸಂಖ್ಯೆ : 2017-18.ಸಾ.ಸಿಂ06 ಸಾ/ಅ.ವಿ-04ರಲ್ಲಿ ಪ್ರೊ. ಎಂ.ಡಿ. ನಂಜುಂಡಸ್ವಾಮಿ ಪೀಠವನ್ನು ತಿಪಟೂರಿನಲ್ಲಿ ಪ್ರಾರಂಭಿಸುವಂತೆ ನಿರ್ಣಯಿಸಿ ಉಳಿದ ನಿರ್ಣಯಗಳನ್ನು ಮತ್ತು ದಿನಾಂಕ:13.03.2018 ರಂದು ನಡೆದ ನಾಲ್ಕನೇ ವಿಶೇಷ ಸಿಂಡಿಕೇಟ್ ಸಭೆಯ ನಡವಳಿಗಳನ್ನು ಯಥಾವತ್ತಾಗಿ ದೃಢೀಕರಿಸಲಾಯಿತು. |
| ಸಿಬ್ಬಂದಿ ವಿಭಾಗ | | | |
| 02 | 2018-19.ಸಾ.ಸಿಂ.01<br>ಸಿಬ್ಬಂದಿ-01 | ಡಾ. ಶ್ರೀಪಾದ್ ತಮ್ಮಯ್ಯ ಭಟ್, ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ ಇವರಿಗೆ ಅಸಾಧಾರಣಾ ರಜೆ ಮಂಜೂರು ಮಾಡುವ ಕುರಿತು. | ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು ಡಾ. ಶ್ರೀಪಾದ್ ತಮ್ಮಯ್ಯ ಭಟ್, ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮ 117 (ಬಿ) (ii)ರನ್ವಯ ವೈದ್ಯಕೀಯ ಪ್ರಮಾಣ ಪತ್ರದ ಮೇರೆಗೆ ಆರು ತಿಂಗಳ ಅಸಾಧಾರಣ ರಜೆಯನ್ನು ಮಂಜೂರು ಮಾಡುವಂತೆ ನಿರ್ಣಯಿಸಿತು. |
| 03 | 2018-19.ಸಾ.ಸಿಂ.01<br>ಸಿಬ್ಬಂದಿ-02 | ಡಾ. ಉದ್ದಗಟ್ಟಿ ವೆಂಕಟೇಶ, ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ ಇವರನ್ನು ವಿಶ್ವವಿದ್ಯಾನಿಲಯದ ಕರ್ತವ್ಯದಿಂದ ಬಿಡುಗಡೆಗೊಳಿಸಿರುವ ಕುರಿತು. | ಡಾ. ಉದ್ದಗಟ್ಟಿ ವೆಂಕಟೇಶ, ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ ಇವರನ್ನು ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ರಾಜ್ಯಶಾಸ್ತ್ರ ವಿಭಾಗದ ಸಹ ಪ್ರಾಧ್ಯಾಪಕರ ಹುದ್ದೆಯ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ವಿಶ್ವವಿದ್ಯಾನಿಲಯದ ಕರ್ತವ್ಯದಿಂದ ದಿನಾಂಕ:08.02.2018ರಂದು ಬಿಡುಗಡೆಗೊಳಿಸಿ ಹೊರಡಿಸಿರುವ ಆದೇಶವನ್ನು ಸಿಂಡಿಕೇಟ್ ಸ್ಥಿರೀಕರಿಸಿತು ಹಾಗೂ ಸದರಿಯವರಿಗೆ ವಿಶ್ವವಿದ್ಯಾನಿಲಯದ ಕಲಾ ಕಾಲೇಜಿನ ರಾಜ್ಯಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರ ಹುದ್ದೆಯ ಕರ್ತವ್ಯದಿಂದ ನಿಯಮಾನುಸಾರ ಧಾರಣಾಧಿಕಾರ ಸೌಲಭ್ಯವನ್ನು (Lien) ಒದಗಿಸುವಂತೆ ಸಿಂಡಿಕೇಟ್ ನಿರ್ಣಯಿಸಿತು. |

22/5/18

| | | | |
|---|---|---|---|
| ಸಾಮಾನ್ಯ ಮತ್ತು ಅಭಿವೃದ್ಧಿ ವಿಭಾಗ | | | |
| 04 | 2018–19.ಸಾ.ಸಿಂ.01 ಸಾ/ಅ.ವಿ–01 | ವಿಶ್ವವಿದ್ಯಾನಿಲಯದ ಡಾ. ಬಿ. ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಂಶೋಧನಾ ಸಹಾಯಕರು ಹಾಗೂ ಕ್ಲರ್ಕ್ ಕಂ ಟೈಪಿಸ್ಟ್ (ತಾತ್ಕಾಲಿಕ) ಇವರುಗಳ ಸೇವೆಯನ್ನು ಮುಂದುವರೆಸುವ ಹಾಗೂ ಸಂಭಾವನೆಯನ್ನು ಹೆಚ್ಚಳ ಮಾಡುವ ಕುರಿತು. | ವಿಶ್ವವಿದ್ಯಾನಿಲಯದ ಡಾ. ಬಿ. ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಂಶೋಧನಾ ಸಹಾಯಕರು ಹಾಗೂ ಕ್ಲರ್ಕ್ ಕಂ ಟೈಪಿಸ್ಟ್ (ತಾತ್ಕಾಲಿಕ) ಇವರುಗಳ ಸೇವೆಯನ್ನು ದಿನಾಂಕ:30.04.2018ರಿಂದ ಅನ್ವಯವಾಗುವಂತೆ ಹನ್ನೊಂದು ತಿಂಗಳ ಅವಧಿಗೆ ಅಥವಾ ವಿಶ್ವವಿದ್ಯಾನಿಲಯದ ಮುಂದಿನ ಆದೇಶದವರೆಗೆ ಮುಂದುವರೆಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಿಂಡಿಕೇಟ್ ಸ್ಥಿರೀಕರಿಸಿತು ಹಾಗೂ ಸಂಭಾವನೆಯ ಹೆಚ್ಚಳ ಕುರಿತಂತೆ ಮುಂದಿನ ಹಣಕಾಸು ಸಮಿತಿ ಸಭೆಗೆ ಮಂಡಿಸಿ ಸದರಿ ಸಭೆಯ ನಿರ್ಣಯದನ್ವಯ ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸುವಂತೆ ಸೂಚಿಸಿತು. |
| ಶೈಕ್ಷಣಿಕ ವಿಭಾಗ | | | |
| 05 | 2018–19.ಸಾ.ಸಿಂ.01 ಶೈ.ವಿ–01 | ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳ ಸ್ನಾತಕ ಪದವಿಗಳಲ್ಲಿ ಕಡ್ಡಾಯವಾಗಿ ಪರಿಸರ ವಿಜ್ಞಾನ ಪಠ್ಯಕ್ರಮವನ್ನು ಅಳವಡಿಸಲು ಕ್ರಮ ಕೈಗೊಳ್ಳುವಂತೆ ತಿಳಿಸಿರುವ ಬಗ್ಗೆ | ಘನತೆವೆತ್ತ ಸರ್ವೋಚ್ಛ ನ್ಯಾಯಾಲಯದ ಆದೇಶದಂತೆ ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳ ಸ್ನಾತಕ ಪದವಿಗಳಲ್ಲಿ ಕಡ್ಡಾಯವಾಗಿ ಪರಿಸರ ವಿಜ್ಞಾನ ಪಠ್ಯಕ್ರಮವನ್ನು ಅಳವಡಿಸಿಕೊಳ್ಳುವ ಸಂಬಂಧ ತುಮಕೂರು ವಿಶ್ವವಿದ್ಯಾನಿಲಯದ ವಿನಿಯಮದನ್ವಯ ರಚಿಸಲಾಗಿರುವ ಸ್ನಾತಕ ಪರಿಸರ ವಿಜ್ಞಾನ ಪಠ್ಯಕ್ರಮವು ಯುಜಿಸಿ ನಿಗಧಿಪಡಿಸಿರುವ ಪಠ್ಯಕ್ರಮದ ಮಾದರಿಯಲ್ಲಿರುವುದರಿಂದ ಸ್ನಾತಕ ಪರಿಸರ ವಿಜ್ಞಾನ ಅಧ್ಯಯನ ಮಂಡಳಿಯವರ ಶಿಫಾರಸ್ಸನ್ನು ಅನುಮೋದಿಸಿ ವಿದ್ಯಾವಿಷಯಕ ಪರಿಷತ್ ಮಾಡಿದ ಶಿಫಾರಸ್ಸನ್ನು ಸಿಂಡಿಕೇಟ್ ಅನುಮೋದಿಸಿತು. |
| 06 | 2018–19.ಸಾ.ಸಿಂ.01 ಶೈ.ವಿ–02 | ಪದವಿ ಕೋರ್ಸ್‌ಗಳಲ್ಲಿ (ವಿಜ್ಞಾನ) ವೈಜ್ಞಾನಿಕ ಮನೋಭಾವ ಹಾಗೂ ಆಧುನಿಕ ವಿಜ್ಞಾನ ಇತಿಹಾಸದ ವಿಷಯಗಳನ್ನು ಅಳವಡಿಸಿ ಭೋದನೆ ಕೈಗೊಳ್ಳುವ ಕುರಿತು ಚರ್ಚಿಸಿ ಕ್ರಮ ಕೈಗೊಳ್ಳುವಂತೆ ತಿಳಿಸಿರುವ ಬಗ್ಗೆ | ಸರ್ಕಾರದ ನಿರ್ದೇಶನದಂತೆ ಪದವಿ ಕೋರ್ಸುಗಳಲ್ಲಿ (ವಿಜ್ಞಾನ) ವೈಜ್ಞಾನಿಕ ಮನೋಭಾವ ಹಾಗೂ ಆಧುನಿಕ ವಿಜ್ಞಾನ ಇತಿಹಾಸದ ವಿಷಯಗಳನ್ನು ಅಳವಡಿಸಿಕೊಂಡು ಬೋಧನೆಯನ್ನು ಕೈಗೊಳ್ಳುವ ಸಂಬಂಧ ಎಲ್ಲಾ ವಿಭಾಗಗಳಿಗೂ ಹಾಗೂ ಕಾಲೇಜುಗಳಿಗೂ ಸುತ್ತೋಲೆಯನ್ನು ಕಳುಹಿಸುವಂತೆ ನಿರ್ಣಯಿಸಿ ಮಾಡಲಾದ ವಿದ್ಯಾವಿಷಯಕ ಪರಿಷತ್‌ನ ಶಿಫಾರಸ್ಸನ್ನು ಸಿಂಡಿಕೇಟ್ ಅನುಮೋದಿಸಿತು. |
| 07 | 2018–19.ಸಾ.ಸಿಂ.01 ಶೈ.ವಿ–03 | ಸ್ನಾತಕ ಪದವಿಯ ಗಣಿತಶಾಸ್ತ್ರ ವಿಷಯದ ಅಧ್ಯಯನ ಮಂಡಳಿಯನ್ನು ರಚಿಸುವ ಕುರಿತು. | ನಿಯಮಾನುಸಾರ ಸ್ನಾತಕ ಪದವಿಯ ಗಣಿತಶಾಸ್ತ್ರ ಅಧ್ಯಯನ ಮಂಡಳಿಯನ್ನು ರಚಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರವನ್ನು ನೀಡಿ ಮಾಡಲಾದ ವಿದ್ಯಾವಿಷಯಕ ಪರಿಷತ್‌ನ ಶಿಫಾರಸ್ಸನ್ನು ಸಿಂಡಿಕೇಟ್ ಅನುಮೋದಿಸಿತು. |

22/5/18

| | | | |
|---|---|---|---|
| 08 | 2018–19.ಸಾ.ಸಿಂ.01 ಶೈ.ವಿ–04 | ಸ್ನಾತಕ ಪದವಿಯ ವಿವಿಧ ವಿಷಯಗಳ ಅಧ್ಯಯನ ಮಂಡಳಿಯನ್ನು ರಚಿಸಿ ಅಧಿಸೂಚಿಸಿರುವ ಕುರಿತು. | ಸ್ನಾತಕ ಪದವಿಯ ವಿವಿಧ ವಿಷಯಗಳ ಅಧ್ಯಯನ ಮಂಡಳಿಗಳನ್ನು ರಚಿಸಿ ಅಧಿಸೂಚಿಸಿರುವ ಕ್ರಮವನ್ನು ಸಭೆಯು ಸ್ಥಿರೀಕರಿಸಿ ಮಾಡಲಾದ ವಿದ್ಯಾವಿಷಯಕ ಪರಿಷತ್‌ನ ಶಿಫಾರಸ್ಸನ್ನು ಸಿಂಡಿಕೇಟ್ ಅನುಮೋದಿಸಿತು. |
| 09 | 2018–19.ಸಾ.ಸಿಂ.01 ಶೈ.ವಿ–05 | ಸ್ನಾತಕ ಪದವಿಯ ವಿವಿಧ ವಿಷಯಗಳ ಮುಕ್ತ ಆಯ್ಕೆ ಪತ್ರಿಕೆಯ ಹಾಗೂ ಬಿ.ಬಿ.ಎಂ ಪದವಿ ಬ್ಯುಸಿನೆಸ್ ಕಮ್ಯೂನಿಕೇಷನ್ –II (Business Communication-II) ವಿಷಯದ ಪ್ರಶ್ನೆ ಪತ್ರಿಕೆಯ ಸ್ವರೂಪವನ್ನು ಸಲ್ಲಿಸಿರುವ ಕುರಿತು. | ಸ್ನಾತಕ ಪದವಿಯ ವಿವಿಧ ವಿಷಯಗಳ ಮುಕ್ತ ಆಯ್ಕೆ ಪತ್ರಿಕೆಯ ಹಾಗೂ ಬಿ.ಬಿ.ಎಂ. ಪದವಿಯ ಬ್ಯುಸಿನೆಸ್ ಕಮ್ಯೂನಿಕೇಷನ್ – II (Business Communication – II) ವಿಷಯದ ಪ್ರಶ್ನೆ ಪತ್ರಿಕೆಯ ಸ್ವರೂಪವನ್ನು ಅನುಮೋದಿಸಿರುವ ಕುಲಪತಿಗಳ ಕ್ರಮವನ್ನು ಸ್ಥಿರೀಕರಿಸಿ ಮಾಡಲಾದ ವಿದ್ಯಾವಿಷಯಕ ಪರಿಷತ್‌ನ ಶಿಫಾರಸ್ಸನ್ನು ಸಿಂಡಿಕೇಟ್ ಅನುಮೋದಿಸಿತು. |
| 10 | 2018–19.ಸಾ.ಸಿಂ.01 ಶೈ.ವಿ–06 | 2018–19ನೇ ಶೈಕ್ಷಣಿಕ ಸಾಲಿನ ವಿವಿಧ ಸ್ನಾತಕ ಪದವಿಗಳ ಪ್ರವೇಶ ಶುಲ್ಕಗಳನ್ನು ನಿಗದಿಪಡಿಸುವ ಕುರಿತು. | 2017–18ನೇ ಶೈಕ್ಷಣಿಕ ಸಾಲಿನ ವಿವಿಧ ಸ್ನಾತಕ ಪದವಿಗಳ ನಿಗದಿಪಡಿಸಲಾದ ಪ್ರವೇಶ ಶುಲ್ಕಗಳನ್ನೇ 2018–19ನೇ ಶೈಕ್ಷಣಿಕ ಸಾಲಿಗೆ ಮುಂದುವರೆಸಿರುವ ಮಾನ್ಯ ಕುಲಪತಿಗಳ ಕ್ರಮವನ್ನು ಅನುಮೋದಿಸಿದ ವಿದ್ಯಾವಿಷಯಕ ಪರಿಷತ್‌ನ ಶಿಫಾರಸ್ಸನ್ನು ಸಿಂಡಿಕೇಟ್ ಒಪ್ಪಿತು. ಮುಂದುವರೆದು, 2019–20ನೇ ಶೈಕ್ಷಣಿಕ ವರ್ಷದಲ್ಲಿ ಪ್ರಾಂಶುಪಾಲರು, ಶ್ರೀ ಸಿದ್ಧಾರ್ಥ ಪ್ರಥಮ ದರ್ಜೆ ಕಾಲೇಜು, ತುಮಕೂರು ಇವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸುವಂತೆ ಸೂಚಿಸಿತು. |
| 11 | 2018–19.ಸಾ.ಸಿಂ.01 ಶೈ.ವಿ–07 | ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ವಿಭಾಗೀಯ ಪರಿಷತ್ (Departmental Council) ರಚಿಸಿ ಅಧಿಸೂಚಿಸಿರುವುದನ್ನು ಸ್ಥಿರೀಕರಿಸುವ ಕುರಿತು. | ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ವಿಭಾಗೀಯ ಪರಿಷತ್ (Departmental Council) ರಚಿಸಿ ಅಧಿಸೂಚಿಸಿರುವ ಕ್ರಮವನ್ನು ಸ್ಥಿರೀಕರಿಸಿದ ವಿದ್ಯಾವಿಷಯಕ ಪರಿಷತ್‌ನ ಶಿಫಾರಸ್ಸನ್ನು ಸಿಂಡಿಕೇಟ್ ಅನುಮೋದಿಸಿತು. |
| 12 | 2018–19.ಸಾ.ಸಿಂ.01 ಶೈ.ವಿ–10 | ಮಾನ್ಯ ಸರ್ವೋಚ್ಛ ನ್ಯಾಯಾಲಯವು W.P.(Civil) No.292/2016 & 997/2013 ರಲ್ಲಿ The Rights of Persons with Disabilities Act, 2016(PWD Act 2016) ರ ಪ್ರಕರಣ 32ರನ್ವಯ ಅಂಗವಿಕಲರಿಗೆ ನೀಡಬೇಕಾದ ಸವಲತ್ತುಗಳಿಗೆ ಸಂಬಂಧಿಸಿಂತೆ ನೀಡಿರುವ ತೀರ್ಪನ್ನು ಅನುಷ್ಠಾನಗೊಳಿಸುವ ಕುರಿತು. | ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ, 5% ಮೀಸಲಾತಿಯನ್ನು ಎಲ್ಲಾ ಪದವಿಗಳ ಪ್ರವೇಶ ಪ್ರಕ್ರಿಯೆಯಲ್ಲಿ ಅಳವಡಿಸಿಕೊಳ್ಳುವಂತೆ ಹಾಗೂ ಮಾನ್ಯ ಸರ್ವೋಚ್ಛ ನ್ಯಾಯಾಲಯದ ತೀರ್ಪಿನಂತೆ ಇತರೆ ಎಲ್ಲಾ ಸೌಕರ್ಯಗಳನ್ನು The Rights of Persons with Disabilities Act, 2016 (PwD Act 2016) ರಂತೆ ಒದಗಿಸುವಂತೆ ಕ್ರಮಕೈಗೊಳ್ಳಲು ನಿರ್ಣಯಿಸಿ ಮಾಡಲಾದ ವಿದ್ಯಾವಿಷಯಕ ಪರಿಷತ್‌ನ ಶಿಫಾರಸ್ಸನ್ನು ಸಿಂಡಿಕೇಟ್ ಅನುಮೋದಿಸಿತು. |
| ಕಾಲೇಜು ಅಭಿವೃದ್ಧಿ ಪರಿಷತ್ | | | |
| 13 | 2018–19.ಸಾ.ಸಿಂ.01 ಕಾ.ಅ.ಪ–01 | ಗುಬ್ಬಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಸ್ವಾಯತ್ತ ಸ್ಥಾನಮಾನದ ಘಟನೋತ್ತರ ಮಂಜೂರಾತಿ ನೀಡಿರುವ ಕುರಿತು. | ಸರ್ಕಾರದ ಆದೇಶದಂತೆ ಗುಬ್ಬಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಸ್ವಾಯತ್ತ ಸ್ಥಾನಮಾನದ ಘಟನೋತ್ತರ ಮಂಜೂರಾತಿ ನೀಡಿರುವ ಕ್ರಮವನ್ನು ಅನುಮೋದಿಸಿ |

| | | | |
|---|---|---|---|
| | | | ಮಾಡಲಾದ ವಿದ್ಯಾವಿಷಯಕ ಪರಿಷತ್‌ನ ಶಿಫಾರಸ್ಸನ್ನು ಸಿಂಡಿಕೇಟ್ ಅನುಮೋದಿಸಿತು. |
| 14 | 2018–19.ಸಾ.ಸಿಂ.01 ಕಾ.ಅ.ಪ–02 | ತಿಪಟೂರಿನ ಉದಯ ಭಾರತಿ ಪ್ರಥಮ ದರ್ಜೆ ಕಾಲೇಜಿನ 2018–19ನೇ ಶೈಕ್ಷಣಿಕ ಸಾಲಿನ ಸಂಯೋಜನೆಗೆ ಸಂಬಂಧಿಸಿದಂತೆ ಮರುತಪಾಸಣೆಗೆ ಸಮಿತಿಯನ್ನು ಕಳುಹಿಸುವಂತೆ ಕೋರಿರುವ ಕುರಿತು. | ಸದರಿ ವಿಷಯದ ಬಗ್ಗೆ ಚರ್ಚಿಸಿದ ಸಿಂಡಿಕೇಟ್ ತಿಪಟೂರಿನ ಉದಯ ಭಾರತಿ ಪ್ರಥಮ ದರ್ಜೆ ಕಾಲೇಜಿನ 2018–19ನೇ ಶೈಕ್ಷಣಿಕ ಸಾಲಿನ ಸಂಯೋಜನೆಗೆ ಸಂಬಂಧಿಸಿದಂತೆ ನಿಯಮಾನುಸಾರ ಮರುತಪಾಸಣೆಗೆ ಸಂಯೋಜನಾ ಸಮಿತಿಯನ್ನು ಕಳುಹಿಸುವಂತೆ ಸಿಂಡಿಕೇಟ್ ಅನುಮೋದಿಸಿತು. |
| ಪರೀಕ್ಷಾ ವಿಭಾಗ | | | |
| 15 | 2018–19.ಸಾ.ಸಿಂ.01 ಪ.ವಿ–01 | 2018ರ ಸಾಲಿನ ವಿವಿಧ ಸ್ನಾತಕೋತ್ತರ ಮತ್ತು ಪ್ರಿ.ಪಿ.ಎಚ್.ಡಿ ಪದವಿ ಪರೀಕ್ಷೆಗಳ ಪೂರ್ವ ಸಿದ್ದತೆಗಾಗಿ ಪರೀಕ್ಷಾ ಮಂಡಳಿಗಳನ್ನು ರಚಿಸಿ ಪರೀಕ್ಷಾ ಕಾರ್ಯಗಳನ್ನು ಕೈಗೊಂಡಿರುವ ಕುರಿತು. | 2018 ರ ಸಾಲಿನ ವಿವಿಧ ಸ್ನಾತಕೋತ್ತರ ಮತ್ತು ಪೂರ್ವ ಪಿಎಚ್.ಡಿ. ಪದವಿ ಪರೀಕ್ಷೆಗಳ ಸಿದ್ಧತೆಗಾಗಿ ಪರೀಕ್ಷಾ ಮಂಡಳಿಗಳನ್ನು ರಚಿಸಿ ಪರೀಕ್ಷಾ ಕಾರ್ಯಗಳನ್ನು ಕೈಗೊಂಡಿರುವ ಕ್ರಮವನ್ನು ಸ್ಥಿರೀಕರಿಸಿದ ವಿದ್ಯಾವಿಷಯಕ ಪರಿಷತ್‌ನ ಶಿಫಾರಸ್ಸನ್ನು ಸಿಂಡಿಕೇಟ್ ಅನುಮೋದಿಸಿತು. |
| ಸಿಬ್ಬಂದಿ ವಿಭಾಗ | | | |
| 16 | 2018–19.ಸಾ.ಸಿಂ.01 ಸಿಬ್ಬಂದಿ–03 | ಡಾ. ಜಯರಾಮು ಎಂ.,(ನಿವೃತ್ತ) ಸಹ ಪ್ರಾಧ್ಯಾಪಕರು, ಸೂಕ್ಷ್ಮಜೀವಶಾಸ್ತ್ರ ವಿಭಾಗ ಇವರಿಗೆ ಗಳಿಕೆ ರಜೆ ಮಂಜೂರು ಮಾಡುವ ಕುರಿತು | ಡಾ. ಜಯರಾಮು ಎಂ., (ನಿವೃತ್ತ), ಸಹ ಪ್ರಾಧ್ಯಾಪಕರು ಇವರಿಗೆ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ನಿರ್ದೇಶಕರಾಗಿ ಸೇವೆ ಸಲ್ಲಿಸಿದ ಅವಧಿಯನ್ನು ಪರಿಗಣಿಸಿ ದಿನಾಂಕ:14.10.2010 ರಿಂದ 10.04.2012ರವರೆಗೆ ಹೆಚ್ಚುವರಿ ಗಳಿಕೆ ರಜೆಯನ್ನು ಮಂಜೂರು ಮಾಡಲು ಸಿಂಡಿಕೇಟ್ ಅನುಮೋದಿಸಿತು. |
| 17 | 2018–19.ಸಾ.ಸಿಂ.01 ಸಿಬ್ಬಂದಿ–04 | ಶ್ರೀ ಎಸ್.ಎನ್ ಕಿರಣ್, ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ಇಂಗ್ಲಿಷ್ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಇವರಿಗೆ Indian Institute of Advanced Study, Shimla ಇಲ್ಲಿ ನಡೆಯುವ ಅಸೋಸಿಯೇಟ್ ಶಿಫ್‌ನ ಅಧಿವೇಶನದಲ್ಲಿ ಭಾಗವಹಿಸಲು ಅನುಮತಿಸಿರುವ ಕುರಿತು. | ಶ್ರೀ ಎಸ್.ಎನ್ ಕಿರಣ್, ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ಇಂಗ್ಲಿಷ್ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಇವರಿಗೆ Indian Institute of Advanced Study, Shimla ಇಲ್ಲಿ ನಡೆಯುವ ಅಸೋಸಿಯೇಟ್ ಶಿಫ್‌ನ ಅಧಿವೇಶನದಲ್ಲಿ ಭಾಗವಹಿಸಲು ಅನುಮತಿಸಿ ದಿನಾಂಕ:09.05.2018ರಂದು ಹೊರಡಿಸಲಾದ ಕಚೇರಿ ಆದೇಶವನ್ನು ಸಿಂಡಿಕೇಟ್ ಸ್ಥಿರೀಕರಿಸಿತು. |
| ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು | | | |
| 18 | 2018–19 ಸಾವಿವಿಪ.01 ಶೈ ವಿ–09 | ಸ್ನಾತಕೋತ್ತರ ವಿಭಾಗಗಳ ಪರಿಷ್ಕೃತ ಪಠ್ಯಕ್ರಮಗಳನ್ನು ಅನುಮೋದಿಸುವ ಕುರಿತು. | ಸ್ನಾತಕೋತ್ತರ ವಿಭಾಗಗಳ ಪರಿಷ್ಕೃತ ಪಠ್ಯಕ್ರಮಗಳನ್ನು ಅನುಮೋದಿಸಿ ಮಾಡಲಾದ ವಿದ್ಯಾವಿಷಯಕ ಪರಿಷತ್‌ನ ಶಿಫಾರಸ್ಸನ್ನು ಸಿಂಡಿಕೇಟ್ ಅನುಮೋದಿಸಿತು. |

**ದಿನಾಂಕ:22.05.2018** ಕುಲಸಚಿವರು 22/5/18 ಮಾನ್ಯ ಕುಲಪತಿಗಳು